**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ ಸೋಜಾ ಇವರು ನಿಯಮ-72 ರ ಮೇರೆಗೆ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ:**

**ಪ್ರಶ್ನೆ:**

**ಕರ್ನಾಟಕ ಗೇರು ಅಭಿವೃದ್ಧಿ ನಿಗಮದಲ್ಲಿ ಸೇವಾ ನಿಯಾಮವಳಿ ಪ್ರಕಾರ ಅಳವಡಿಸಿಕೊಂಡು ಕಾಲಕಾಲಕ್ಕೆ ಸೇವಾ ಸೌಲಭ್ಯ ನೀಡುತ್ತಾ ಬರಲಾಗಿದ್ದರೂ, ಅರ್ಹ ದಿನಕೂಲಿ 'ಸಿಬ್ಬಂದಿಗಳಿಗೆ 7ನೇ ಪರಿಷ್ಕೃತ ವೇತನವನ್ನು ಅಂಗೀಕರಿಸಿ ಭಟವಾಡ ಮಾಡಲು ವಿನಂತಿಸಲಾಗಿದ್ದು, ಆದರೆ 7ನೇ ಪರಿಷ್ಕೃತ ವೇತನ ಮಂಜೂರು ಆಗದೇ ಇರುವುದರಿಂದ ಸೇವಾ ನಿಯಮಾವಳಿ ಸರ್ಕಾರದಿಂದ ತುಟ್ಟಿಭತ್ಯೆ ಇಲ್ಲದಂತಾಗಿದ್ದು, ಈ ಬಗ್ಗೆ ಸರ್ಕಾರ ನೀಡದೇ ನಿಗಮವೇ ಭರಿಸುವಲ್ಲಿ ಅಡಚಣೆ ಉಂಟಾಗಿದ್ದು, ನೌಕರರ ಪಾಲಿಗೆ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಇದನ್ನು ಕೂಡಲೇ ಮಂಜೂರು ಮಾಡುವ ಬಗ್ಗೆ.**

**ಉತ್ತರ:**

ದಿನಾಂಕ: 26-09-2024 ರಂದು ನಡೆದ ಕರ್ನಾಟಕ ಗೇರು ಅರಣ್ಯ ಅಭಿವೃದ್ಧಿ ನಿಗಮದ 203ನೇ ಆಡಳಿತ ಮಂಡಳಿಯ ಸಭೆಯಲ್ಲಿ ನಿಗಮದ ನೌಕರರಿಗೆ 7ನೇ ವೇತನ ಶ್ರೇಣಿಯನ್ನು ಪಾವತಿಸಲು ಅನುಮೋದನೆಯನ್ನು ನೀಡಲಾಗಿದ್ದು, ಅದರನ್ವಯ ದಿನಾಂಕ:01-08-2024ರಿಂದ ಜಾರಿಗೆ ಬರುವಂತೆ ನಿಗಮದ ಖಾಯಂ ಉದ್ಯೋಗಿಗಳಿಗೆ ಆರ್ಥಿಕ ಸೌಲಭ್ಯಗಳೊಂದಿಗೆ 7ನೇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿರುತ್ತದೆ.

ಆದರೆ, ದಿನಾಂಕ:08-11-2024ರಂದು ಆರ್ಥಿಕ ಇಲಾಖೆಯ ಹಣಕಾಸು ಕಾರ್ಯದರ್ಶಿಯವರು (ವಿತ್ತೀಯ ಸುಧಾರಣೆ) ಸಭೆಯನ್ನು ನಡೆಸಿ, ಮಂಡಳಿಗಳು, ನಿಗಮಗಳು ಮತ್ತು ಕಂಪನಿಗಳ ನೌಕರರಿಗೆ 7ನೇ ವೇತನ ಶ್ರೇಣಿಯನ್ನು ವಿಸ್ತರಿಸಲು ಹಣಕಾಸು ಇಲಾಖೆಯಿಂದ ಪೂರ್ವಾನುಮೋದನೆ ಪಡೆಯಬೇಕೆಂದು ತಿಳಿಸಿರುತ್ತಾರೆ. ಮುಂದುವರೆದು, ಆರ್ಥಿಕ ಇಲಾಖೆಯು ರಾಜ್ಯ ಸಾರ್ವಜನಿಕ ವಲಯದ ಸಂಸ್ಥೆಗಳು, ಮಂಡಳಿಗಳು, ನಿಗಮಗಳು ಇತ್ಯಾದಿಗಳಲ್ಲಿ 7ನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಶ್ರೇಣಿಗಳನ್ನು ಅಳವಡಿಸಿಕೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆಯುವಂತೆ ದಿನಾಂಕ:25.11.2024 ರಲ್ಲಿ ಸುತ್ತೋಲೆಯನ್ನು ಹೊರಡಿಸಿರುತ್ತದೆ.

ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ಅಡಿಯಲ್ಲಿ ಕೆಲಸ ಮಾಡುವ ನೌಕರರಿಗೆ 7ನೇ ವೇತನ ಶ್ರೇಣಿಯನ್ನು ವಿಸ್ತರಿಸುವ ಕುರಿತು ದಿನಾಂಕ:22.01.2025ರಂದು ನಡೆದ ನಿಗಮದ ಆಡಳಿತ ಮಂಡಳಿಯ 204ನೇ ಸಭೆಯಲ್ಲಿ ಮಂಡಿಸಿದಾಗ, ನಿಗಮದ ಖಾಯಂ ಉದ್ಯೋಗಿಗಳಿಗೆ ವಿಸ್ತರಿಸಲಾದ 7ನೇ ವೇತನ ಶ್ರೇಣಿಯನ್ನು ಹಿಂಪಡೆದು, ಆರ್ಥಿಕ ಇಲಾಖೆಯ ದಿನಾಂಕ:25.11.2024ರ ಸುತ್ತೋಲೆಯ ಹಾಗೂ ದಿನಾಂಕ:08.11.2024ರಂದು ನಡೆದ ಆರ್ಥಿಕ ಇಲಾಖೆಯ ಸಭೆಯ ನಡಾವಳಿ ಪ್ರಕಾರ ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆಯುವ ಬಗ್ಗೆ ನಿರ್ಧರಿಸಲಾಗಿರುತ್ತದೆ.

...2..

ಮಂಡಳಿಯ ನಿರ್ಣಯದನ್ವಯ, ಕರ್ನಾಟಕ ಗೇರು ಅರಣ್ಯ ಅಭಿವೃದ್ಧಿ ನಿಗಮದ ಖಾಯಂ ಉದ್ಯೋಗಿಗಳಿಗೆ ವಿಸ್ತರಿಸಲಾದ 7ನೇ ವೇತನ ಶ್ರೇಣಿಯನ್ನು 204ನೇ ಆಡಳಿತ ಮಂಡಳಿ ಸಭೆಯ ನಿರ್ದೇಶನದಂತೆ ಹಿಂತೆಗೆದುಕೊಳ್ಳುವ ಆದೇಶವನ್ನು ದಿನಾಂಕ:19.02.2025ರಂದು ಹೊರಡಿಸಲಾಗಿರುತ್ತದೆ.

ಕರ್ನಾಟಕ ಗೇರು ಅಭಿವೃದ್ಧಿ ನಿಗಮವು ಸಂಚಿತ ನಷ್ಟವನ್ನು ಅನುಭವಿಸುತ್ತಿದೆ ಎಂಬ ಕಾರಣವನ್ನು ನೀಡಿ ಆರ್ಥಿಕ ಇಲಾಖೆಯು ಸದರಿ ನೌಕರರಿಗೆ 7ನೇ ವೇತನ ಶ್ರೇಣಿಯನ್ನು ವಿಸ್ತರಿಸುವ ಪ್ರಸ್ತಾವನೆಯನ್ನು ದಿನಾಂಕ: 05.07.2025 ರಂದು ತಿರಸ್ಕರಿಸಿರುತ್ತದೆ.

ದಿನಾಂಕ:25.08.2023ರಂದು ನಡೆದ ನಿಗಮದ ಆಡಳಿತ ಮಂಡಳಿಯ 198ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ, ನಿಗಮದ ಉದ್ಯೋಗಿಗಳಿಗೆ ಶೇ. 17 ರಷ್ಟು ಮಧ್ಯಂತರ ಪರಿಹಾರ (ಐಆರ್) ಅನ್ನು ವಿಸ್ತರಿಸಿದ್ದು, ಶೇ. 17 ರಷ್ಟು ಮಧ್ಯಂತರ ಪರಿಹಾರವನ್ನು ನಿಗಮದ ನೌಕರರಿಗೆ ಮುಂದುವರಿಸಲಾಗುತ್ತಿದೆ.

ದಿನಾಂಕ:26.09.2024ರಂದು ನಡೆದ ನಿಗಮದ 203ನೇ ಆಡಳಿತ ಮಂಡಳಿಯ ಸಭೆಯ ನಿರ್ಧಾರದಂತೆ ದಿನಾಂಕ:01.08.2024 ರಿಂದ 31.01.2025ರವರೆಗೆ ನಿಗಮದ ಖಾಯಂ ಉದ್ಯೋಗಿಗಳಿಗೆ 7ನೇ ವೇತನ ಶ್ರೇಣಿಯ ಪ್ರಕಾರ ವೇತನವನ್ನು ವಿತರಿಸಲಾಗಿದೆ. ಆರ್ಥಿಕ ಇಲಾಖೆಯು ಅನುಮತಿ ನೀಡದೇ ಇರುವುದರಿಂದ ಪ್ರಸ್ತುತ ನಿಗಮದ ಉದ್ಯೋಗಿಗಳಿಗೆ 6ನೇ ವೇತನ ಆಯೋಗದಂತೆ ಹಾಗೂ ಶೇ. 17 ರಷ್ಟು ಮಧ್ಯಂತರ ಪರಿಹಾರ (ಐಆರ್) ವನ್ನು ಪಡೆಯುತ್ತಿದ್ದಾರೆ.

**ಕಡತ ಸಂಖ್ಯೆ: ಅಪಜೀ 32 ಎಫ್‌ಪಿಸಿ 2026**

(ಈಶ್ವರ ಬಿ.ಖಂಡ್ರೆ)
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**